## ದಿನಾಂಕ:28-08-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 10(74)/2010-11**

ಬೆಂಗಳೂರು ವೈಟ್‌ಫೀಲ್ಡ್‌ನ ವಿಶೇಷ ಆರ್ಥಿಕ ವಲಯದಲ್ಲಿನ (SEZ) Export Promotion Industrial Park (EPIP) ನಲ್ಲಿ ಬರುವ ವಿವಿಧ ರಸ್ತೆಗಳ ಅಭಿವೃದ್ಧಿ, ಡಾಂಬರೀಕರಣ ಕಾಮಗಾರಿಗಳ ಹಾಗೂ ಅಂಡರ್‌ಪಾಸ್ ಅನ್ನು ನಿರ್ಮಾಣ ಮಾಡುವ ಪ್ರಸ್ತಾವನೆಗಳನ್ನು ASIDE ಯೋಜನೆಯಡಿಯಲ್ಲಿ ಕೈಗೊಳ್ಳಲು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಈ ಕೆಳಕಂಡ 1ನೇ ಹಂತದ ಪ್ರಸ್ತಾವನೆಗಳ ವಿವರವಾದ ಯೋಜನಾ ವರದಿಗಳನ್ನು (DPR's) ವ್ಯವಸ್ಥಾಪಕ ನಿರ್ದೇಶಕರು VITC ಇವರಿಗೆ ಕಳುಹಿಸಲಾಗಿತ್ತು.

| **Ist Phase works :** | |
|---|---|
| 1) Improvements, strengthening and Asphalting of Internal roads (4 Lane) EPIP Zone White field, Bangalore. | Rs.16.40 Crores |
| 2) Improvements, strengthening and Asphalting of roads (2 Lane) EPIP Zone White field, Bangalore. | Rs.13.60 Crores |
| 3) Construction of Bi-directional Underpass at Graphite India Junction Near EPIP Zone White field, Bangalore. | Rs.15.00 Crores |
| **Total** | **Rs.45.00 Crores** |

ಸದರಿ ಪ್ರಸ್ತಾವನೆಗಳಿಗೆ ದಿನಾಂಕ:21-12-09 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ SLEPC ಸಭೆಯಲ್ಲಿ ನಿರ್ಣಯವನ್ನು ಕೈಗೊಂಡು SLEPC ವತಿಯಿಂದ ಮಂಜೂರಾತಿ ನೀಡಿರುತ್ತಾರೆಂದು, ವ್ಯವಸ್ಥಾಪಕ ನಿರ್ದೇಶಕರು ವಿಶ್ವೇಶ್ವರಯ್ಯ ಕೈಗಾರಿಕಾ ಉದ್ಯಮ ಕೇಂದ್ರ (VITC), ಬೆಂಗಳೂರು ರವರು ತಿಳಿಸಿರುತ್ತಾರೆ. ಸದರಿ ಪ್ರಸ್ತಾವನೆಗಳಿಗೆ ಈ ಕೆಳಕಂಡಂತೆ ASIDE ಯೋಜನೆಯಡಿಯಲ್ಲಿ ಆರ್ಥಿಕ ನೆರವಿನ ಪರಿಮಾಣವನ್ನು SLEPC ಯಿಂದ ಅನುಮೋದಿಸಲಾಗಿದೆಯೆಂದು ಮತ್ತು ಸದರಿ ಕಾಮಗಾರಿಗಳನ್ನು ಸೆಪ್ಟೆಂಬರ್-2010 ರ ಒಳಗಾಗಿ ಪೂರ್ಣಗೊಳಿಸುವಂತೆ ಮುಖ್ಯ ಕಾರ್ಯದರ್ಶಿಯವರು ಸೂಚಿಸಿರುತ್ತಾರೆಂದು ತಿಳಿಸಿರುತ್ತಾರೆ.

Funding Pattern

| | |
|---|---|
| ASIDE Share | :- Rs.20.00 Crores |
| BBMP Share | :- Rs.20.50 Crores |
| WEPPIA Share (White Field Export Promotion Park industrial Association) | :- Rs. 4.50 Crores |
| Total | :- Rs.45.00 Crores |

..........2

ಸದರಿ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಭರಿಸಬೇಕಾದ ಮೊತ್ತ ರೂ.20.50 ಕೋಟಿಗಳನ್ನು 2010–11 ನೇ ಸಾಲಿನ ಆಯವ್ಯಯದಲ್ಲಿ ಭರಿಸಲು ಅವಕಾಶ ಕಲ್ಪಿಸುವಂತೆ ಹಾಗೂ ಸದರಿ ಕಾಮಗಾರಿಗಳಿಗೆ ASIDE ಆರ್ಥಿಕ ನೆರವಿನ ಮೊತ್ತವನ್ನು ಖರ್ಚು ಮಾಡಿದ ಬಳಿಕ ಪಾಲಿಕೆಯು ಭರಿಸಬೇಕಾದ ಮೊತ್ತವನ್ನು ಖರ್ಚು ಮಾಡುವಂತೆ ಸೂಚಿಸಿ, ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:600/09–10 ದಿನಾಂಕ:17–02–2010 ರಂದು ನೀಡಿರುತ್ತಾರೆ. ಇದರನ್ವಯ ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು ಮೇಲ್ಕಂಡ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ E-Procurement ಮೂಲಕ ಗುತ್ತಿಗೆದಾರರನ್ನು ನೇಮಿಸಲು ಟೆಂಡರ್ ಅಧಿಸೂಚನೆಯನ್ನು ಕಾರ್ಯಪಾಲಕ ಅಭಿಯಂತರರು (ಬೃಹತ್ ರಸ್ತೆಗಳು–ವಿಶೇಷ) ರವರು ಹೊರಡಿಸಿದ್ದು, Improvements, strengthening and Asphalting of Internal roads (4 Lane) EPIP Zone White field, Bangalore ರ ಕಾಮಗಾರಿಯ ಅಂದಾಜು ಮೊತ್ತ ರೂ.16.40 ಕೋಟಿಗಳಾಗಿದ್ದು, ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಕೆಳಕಂಡ ಗುತ್ತಿಗೆದಾರರು ಭಾಗವಹಿಸಿರುತ್ತಾರೆ.

**ಗುತ್ತಿಗೆದಾರರ ಹೆಸರುಗಳು**

1) Sri. B.Dolika Praveen (M/s. G.V.R. Infra Projects Limited)
2) Sri. H.P. Madhukar
3) Sri. Mestrappa Venkatramana Reddy
4) Sri. R.Maheshwara Naidu (M/s. R.M.N. Infrastructures Limited)
5) Sri. Srirangapatna Ramachandra Ravishankar

ಮೇಲ್ಕಂಡ ಗುತ್ತಿಗೆದಾರರುಗಳ ತಾಂತ್ರಿಕ ಬಿಡ್‌ಗಳನ್ನು ಪರಿಶೀಲಿಸಲಾಗಿ, Technical bids Evaluation ಅಂಶಗಳಲ್ಲಿ Sri. B.Dolika Praveen (M/s. G.V.R. Infra Projects Limited) ರವರು ಅರ್ಹರಾದ ಮೇರೆಗೆ ಸದರಿಯವರ Technical bid ಅನ್ನು ಮುಖ್ಯ ಅಭಿಯಂತರರು ಅನುಮೋದಿಸಿರುತ್ತಾರೆ.

ಅದರಂತೆ, Sri. B.Dolika Praveen (M/s. G.V.R. Infra Projects Limited) ರವರ Financial bid ತೆರೆದು, ತುಲನಾತ್ಮಕ ಪಟ್ಟಿಯನ್ನು (Comparative Statement) ತಯಾರಿಸಲಾಗಿ, ಸದರಿ ಗುತ್ತಿಗೆದಾರರು ವಿವಿಧ ಅಂಶಗಳಿಗೆ ನಮೂದಿಸಿರುವ ದರಗಳನ್ನು 2009–10 ನೇ ಸಾಲಿನ ಬೆಂಗಳೂರು ವೃತ್ತದ PWD SR ದರಗಳಿಗೆ ಹಾಗೂ ಸಿಮೆಂಟ್, ಕಬ್ಬಿಣ ಮತ್ತು ಡಾಂಬರಿನ Issue Rates ಗಳಿಗೆ ಹೋಲಿಸಿದಾಗ, ನಮೂದಿಸಿರುವ ಒಟ್ಟು ಮೊತ್ತ ಹಾಗೂ ಶೇಕಡವಾರು ವಿವರಗಳು ಈ ಕೆಳಕಂಡಂತಿರುತ್ತವೆ.

..........3

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಗುತ್ತಿಗೆಗೆ ಇಡಲಾದ ಮೊತ್ತ (ರೂ.ಗಳಲ್ಲಿ) | ಗುತ್ತಿಗೆದಾರರು ನಮೂದಿಸಿರುವ ಮೊತ್ತ (ರೂ.ಗಳಲ್ಲಿ) | % When compared to amount put to tender (SR of 2009-10 and issue rate of Bitumen as on 11-09-2009) | % When compared to amount put to tender (SR of 2009-10 and Present issue rate of Bitumen (Dt: 01-10-2009) cement (Dt: 09-12-2009) and Steel (Dt: 21-01-2010) |
|---|---|---|---|---|---|
| 1 | Sri. B.Dolika Praveen (M/s. G.V.R. Infra Projects Limited) | 15,69,62,715/- | 18,82,98,915/- | +19.96% above | +17.47% above |

Sri. B.Dolika Praveen (M/s. G.V.R. Infra Projects Limited) ರವರು Improvements, strengthening and Asphalting of Internal roads (4 Lane) EPIP Zone White field, Bangalore ರ ಕಾಮಗಾರಿಗೆ ನಮೂದಿಸಿರುವ ಒಟ್ಟು ಮೊತ್ತ ರೂ.18,82,98,915/- ಗಳನ್ನು 2009-10 ನೇ ಸಾಲಿನ ದರಗಳಿಗೆ ಹಾಗೂ ಈಗಿನ ಸಿಮೆಂಟ್, ಕಬ್ಬಿಣ ಹಾಗೂ ಡಾಂಬರಿನ Issue rates ಗಳಿಗೆ ಹೋಲಿಸಿದಾಗ ಶೇಕಡ (+17.47%) ಹೆಚ್ಚಾಗಿರುತ್ತದೆ. ತದರನ್ವಯ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಮೊತ್ತವನ್ನು ಶೇಕಡ (+17.47%) ಹೆಚ್ಚುವರಿಯಿಂದ ಶೇಕಡ (+15.00%) ಹೆಚ್ಚುವರಿಗೆ ಕಾಮಗಾರಿಯನ್ನು ಕೈಗೊಳ್ಳಲು ಒಪ್ಪಿಗೆ ನೀಡಿದ್ದು, ಸದರಿ ಗುತ್ತಿಗೆದಾರರ ಟೆಂಡರ್ **ಮೊತ್ತ ರೂ.18,43,36,936**/- ಗಳಿಗೆ ಸರ್ಕಾರದ ಅನುಮೋದನೆ ಪಡೆಯುವ ಬಗ್ಗೆ ಮಾನ್ಯ ಆಡಳಿತಗಾರರಿಂದ ಅನುಮೋದನೆಯನ್ನು ಕೋರಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ 11/2010-11, ದಿನಾಂಕ:17-04-2010 ರಂದು ಅನುಮೋದನೆ ನೀಡಿ ಸರ್ಕಾರದ ಅನುಮೋದನೆಯನ್ನು ಪಡೆಯುವಂತೆ ಸೂಚಿಸಿರುತ್ತಾರೆ. ಅದರಂತೆ, ಸದರಿ ಕಾಮಗಾರಿಯ ಟೆಂಡರ್ ಪ್ರಸ್ತಾವನೆಯನ್ನು ದಿನಾಂಕ: 21-04-2010 ರಂದು ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಅದರನ್ವಯ, ಸದರಿ ಕಾಮಗಾರಿಗೆ ಸರ್ಕಾರವು ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಮೊತ್ತಕ್ಕೆ ಅನುಮೋದನೆಯನ್ನು ಸಂಖ್ಯೆ: ನಅಇ 346 ಎಂಎನ್‌ವೈ 2010 ದಿನಾಂಕ: 07-08-2010 ರಂದು ನೀಡಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, Improvements, strengthening and Asphalting of Internal roads (4 Lane) EPIP Zone White field, Bangalore ರ ಕಾಮಗಾರಿಗೆ ಸಂಬಂಧಿಸಿದಂತೆ ಮಾನ್ಯ ಆಡಳಿತಗಾರರು ಸದರಿ ಕಾಮಗಾರಿಯನ್ನು ಕೈಗೊಳ್ಳುವ ಮುನ್ನ ಪಾಲಿಕೆಯ ಮುಂದೆ ಮಂಡಿಸುವಂತೆ ಸೂಚಿಸಿರುತ್ತಾರೆ. ಅದರಂತೆ, ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ ಸದರಿ ಕಾಮಗಾರಿಯ ಟೆಂಡರ್ ಅನ್ನು ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಹಾಗೂ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17-08-2010ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:17-08-2010ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಸಿ.ಕೆ.ರಾಮಮೂರ್ತಿರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:17-08-2010 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ. ನಟರಾಜ)

ಮಹಾಪೌರರು